ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ

ಸಂಪುಟ : 45 ಸಂಚಿಕೆ : 18

• ಪುಷ್ಯ–ಮಾಘ • ಕಲಿಯುಗಾಬ್ದ 5125 • 15–01–2024 • ತ್ರೈವಾರ್ಷಿಕ : ರೂ. 150.00 • ಬಿಡಿ ಪ್ರತಿ : ರೂ. 3.00 • ಪುಟಗಳು : 4



## ಶ್ರೀರಾಮ - ಭಾರತದ ಸಾಂಸ್ಕೃತಿಕ ಅಸ್ಮಿತೆ

**5 ಶತಮಾನಗಳ ಸತತ ಸಂಘರ್ಷದ ಶಾಂತಿಯುತ ಹೋರಾಟ, ದೇಶದ ಎಲ್ಲೆಡೆ ಮೊಳಗಿದ ಅತಿದೊಡ್ಡ ಹಾಗೂ ಸುದೀರ್ಘ ಸಾಮಾಜಿಕ – ಸಾಂಸ್ಕೃತಿಕ ಆಂದೋಲನ, 134 ವರ್ಷಗಳ ಕಾನೂನಾತ್ಮಕ ಹೋರಾಟದ ಪ್ರತಿಫಲವಾಗಿ ಭಾರತದ ಅಸ್ಮಿತೆಯಾದ ಶ್ರೀರಾಮನ ಮಂದಿರ ಆತನ ಜನ್ಮಸ್ಥಳ ಅಯೋಧ್ಯೆಯಲ್ಲೇ ನಿರ್ಮಾಣವಾಗುತ್ತಿದೆ. "ಮಂದಿರವಲ್ಲೇ ಕಟ್ಟುವೆವು" ಎಂಬ ಐತಿಹಾಸಿಕ ಘೋಷಣೆಯ ಸಂಕಲ್ಪದ ಸಾಕಾರದ ಕ್ಷಣದಲ್ಲಿ ನಾವಿದ್ದೇವೆ. ಈ ಸಂಭ್ರಮದ ಸಂದರ್ಭದಲ್ಲಿ ರಾಮಮಂದಿರದ ವಿಶೇಷತೆಗಳ ಕುರಿತು ಮಾಹಿತಿ ಸರಣಿಯ ನಾಲ್ಕನೇ ಭಾಗವನ್ನು ಈ ಸಂಚಿಕೆಯಲ್ಲಿ ವಿಸ್ತೃತವಾಗಿ ನೀಡಲಾಗಿದೆ.**

**ಹೇಗಿರುವನು ರಾಮಲಲಾ?** ಜಗತ್ತಿನ ಕಾತುರತೆಗೆ ಕಾರಣನಾದ ರಾಮಲಲಾ(ಬಾಲರಾಮ)ನ ಮೂರ್ತಿ 51 ಇಂಚು ಎತ್ತರವಿರುತ್ತದೆ. ಧನುರ್ಧಾರಿಯಾದ 5 ವರ್ಷ ವಯಸ್ಸಿನ ಬಾಲ ರಾಮನನ್ನು ತಾಯಿ ಭಾರತಿಯ ಮಡಿಲಿಗೊಪ್ಪಿಸಲು ಶಿಲ್ಪಿಗಳು ಶ್ರಮವಹಿಸಿದ್ದಾರೆ. ರಾಮನ ಪಾದದ ಕೆಳಗಡೆ ಕಮಲದ ಹೂವು ಇರಲಿದೆ.

**ಜನವರಿ 22ರಂದೇ ಏಕೆ ರಾಮಲಲಾ ಪ್ರಾಣಪ್ರತಿಷ್ಠೆ?** ಭಗವಾನ್ ಶ್ರೀರಾಮ ಅಭಿಜಿತ್ ಯೋಗದಲ್ಲಿ ಜನಿಸಿದವನು. ಇತರೆ ದಿನಗಳಲ್ಲಿ ಈ ಯೋಗವು ಸ್ವಲ್ಪ ಕಡಿಮೆ ಅವಧಿಯಲ್ಲಿರುತ್ತದೆ. ಆದರೆ 2024ರ ಜನವರಿ 22ರಂದು ಅಭಿಜಿತ್ ಯೋಗ ಸ್ವಲ್ಪ ಹೆಚ್ಚು ಸಮಯವಿರುವುದರಿಂದ ಅಂದೇ ರಾಮಲಲಾನ ಪ್ರಾಣಪ್ರತಿಷ್ಠಾಪನೆ ಮಾಡುವುದಕ್ಕೆ ಸೂಕ್ತವಾದ ಸಮಯ ಎಂದು ತೀರ್ಮಾನಿಸಲಾಗಿದೆ.

**ಪ್ರಾಣಪ್ರತಿಷ್ಠೆಯಂದು ಏನಿದೆ ವಿಶೇಷ?** ಜನವರಿ 22 ರಂದು ನಡೆಯಲಿರುವ ರಾಮಲಲಾ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ರಾಷ್ಟ್ರದ ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಸೇರಿದಂತೆ 140 ವಿವಿಧ ಸಂಪ್ರದಾಯಗಳ ಸಾಧು, ಸಂತ, ಮಹಂತರ ಜೊತೆಗೆ ಸುಮಾರು 2500 ಆಹ್ವಾನಿತ ಗಣ್ಯರಿರುತ್ತಾರೆ. ಜನವರಿ 22ರಂದು ಮಧ್ಯಾಹ್ನ 12:00 ಗಂಟೆಗೆ ಪ್ರಾಣಪ್ರತಿಷ್ಠೆ ಪೂಜೆ ಆರಂಭವಾಗಲಿದ್ದು, ಮಧ್ಯಾಹ್ನ 12:45 ರಿಂದ 1:00 ಗಂಟೆಯೊಳಗೆ ಗರ್ಭಗುಡಿಯೊಳಗೆ ರಾಮಲಲಾ ಪ್ರಾಣಪ್ರತಿಷ್ಠಾಪನೆ ನಡೆಯುತ್ತದೆ. ರಾಮಲಲಾ ಪ್ರಾಣಪ್ರತಿಷ್ಠೆ ನಡೆಯುವ ಹಿನ್ನೆಲೆಯಲ್ಲಿ 10 ದಿನಗಳ ಕಾಲ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

**ಜನವರಿ 15, 2024ರ ನಂತರ ಕಾರ್ಯಕ್ರಮಗಳು ಹೇಗಿರಲಿವೆ?** ಜನವರಿ 16ಕ್ಕೆ ಹೋಮಹವನ ಶುರುವಾಗಲಿದೆ. ಗರ್ಭಗುಡಿಗೆ ಆಯ್ಕೆಯಾಗುವ ಬಾಲರಾಮನ ಮೂರ್ತಿಯ ದೇವದರ್ಶನ ಯಾತ್ರೆ ಜ. 17ರಂದು ನಡೆಯಲಿದೆ. ರಾಮ ತನ್ನ ಮೂಲಸ್ಥಾನಕ್ಕೆ ಹೋಗುವ ಮುನ್ನ ಬೇರೆ ಬೇರೆ ದೇವರ ದರ್ಶನ ಮಾಡಬೇಕು ಎಂಬ ಪರಂಪರೆಯಿದೆ. ಹೀಗಾಗಿ, ಈಗಿರುವ ರಾಮಸೇವಕಪುರದಿಂದ ಸರಯೂ ನದಿವರೆಗೆ ಮೆರವಣಿಗೆ ಮೂಲಕ ರಾಮನನ್ನು ಕರೆದುಕೊಂಡು ಹೋಗಿ, ಅಲ್ಲಿ ಸ್ನಾನ ಮಾಡಿಸಲಾಗುತ್ತದೆ. ಅಲ್ಲಿಂದ ಮುಖ್ಯರಸ್ತೆ ಮೂಲಕ ಪ್ರದಕ್ಷಿಣೆ ಹಾಕುತ್ತಾ ಭಗವಂತನ ಸನ್ನಿಧಾನಕ್ಕೆ ತಲುಪಿಸಲಾಗುತ್ತದೆ. ಅಂದರೆ 18ರಂದು ಗರ್ಭಗೃಹದಲ್ಲಿ ರಾಮನ ಮೂರ್ತಿ ಪ್ರವೇಶವಾಗಲಿದೆ. ಬಳಿಕ ಜಲಾಧಿವಾಸ, ಅನ್ನಾಧಿವಾಸ, ಫಲಾಧಿವಾಸ, ಅಜ್ಯಾಧಿವಾಸ ನಡೆಯಲಿದೆ. ಜಲಾಧಿವಾಸ ಎಂದರೆ ನೀರಿನಲ್ಲಿ ಮೂರ್ತಿಯನ್ನು ಮುಳುಗಿಸುವುದು. ನಂತರ, ಅಕ್ಕಿ, ಅನ್ನ, ಜೋಳಗಳಲ್ಲಿ ಮುಚ್ಚಿಡಲಾಗುತ್ತದೆ. ಮೂರನೇ ದಿನ ಎಲ್ಲಾ ಫಲಗಳಲ್ಲಿ ಮೂರ್ತಿಯನ್ನು ಮುಚ್ಚಿಡಲಾಗುತ್ತದೆ. ನಂತರ ಅಜ್ಯಾಧಿವಾಸ ಅಂದರೆ ತುಪ್ಪದಲ್ಲಿ ಮುಳುಗಿಸುವುದು. 18ರಿಂದ ಆರಂಭಗೊಳ್ಳುವ ಪ್ರಾಣಪ್ರತಿಷ್ಠಾ ಪ್ರಕ್ರಿಯೆಗಳು 21ಕ್ಕೆ ಪೂರ್ಣಗೊಳ್ಳುತ್ತವೆ. 22ರ ಮಧ್ಯಾಹ್ನ 12.20ರ ಅಭಿಜಿತ್ ಮುಹೂರ್ತದಲ್ಲಿ ಶ್ರೀರಾಮನಿಗೆ ಪ್ರಾಣಪ್ರತಿಷ್ಠೆಯಾಗಲಿದೆ.



- **ಜನವರಿ 22 ರಂದು ಅಯೋಧ್ಯೆಯ ರಾಮಮಂದಿರದಲ್ಲಿ ರಾಮಲಲಾ ಪ್ರಾಣಪ್ರತಿಷ್ಠಾಪನೆಯ ಐತಿಹಾಸಿಕ ಕಾರ್ಯಕ್ರಮ.**
- **ದೇಶದ ಪ್ರತಿ ಗ್ರಾಮದ ದೇವಾಲಯಗಳಲ್ಲಿ ವಿವಿಧ ಕಾರ್ಯಕ್ರಮಗಳು.**
- **'ಶ್ರೀರಾಮ ಜಯರಾಮ ಜಯ ಜಯ ರಾಮ' ಮಂತ್ರ ಪಠಣ**
- **ಜನವರಿ 22ರಂದು ಸಂಜೆ ಪ್ರತಿ ಮನೆಯಲ್ಲೂ 5 ಹಣತೆ/ದೀಪ ಬೆಳಗುವುದು.**

# ರಾಮಮಂದಿರ ರಾಷ್ಟ್ರಮಂದಿರ







ನಮಸ್ಕಾರ ಮಂಟಪದ ಮೇಲ್ಛಾವಣಿ

## ಶ್ರೀರಾಮ ಜನ್ಮಭೂಮಿ ಮಂದಿರದ ವಿಶೇಷತೆಗಳು

- ರಾಮಜನ್ಮಭೂಮಿ ಅಯೋಧ್ಯೆಯ ರಾಮಮಂದಿರವು ಸಾಂಪ್ರದಾಯಿಕ ನಾಗರ ಶೈಲಿಯಲ್ಲಿ ನಿರ್ಮಾಣವಾಗಿದೆ.
- ದಕ್ಷಿಣ ದಿಕ್ಕಿನಲ್ಲಿ ಹನುಮಂತ, ಉತ್ತರ ದಿಕ್ಕಿನಲ್ಲಿ ಮಾತಾ ಅನ್ನಪೂರ್ಣೇಶ್ವರಿ ಮಂದಿರವಿರಲಿದೆ.
- ಈ ಮಂದಿರವು ಸುಮಾರು 380 ಅಡಿ ಉದ್ದ, 250 ಅಡಿ ಅಗಲ ಮತ್ತು 161 ಅಡಿ ಎತ್ತರವನ್ನು ಹೊಂದಿದೆ.
- ಮಂದಿರದಲ್ಲಿ 32 ಮೆಟ್ಟಿಲುಗಳಲ್ಲಿ ಕ್ರಮಿಸಿ, ಸಿಂಹದ್ವಾರದ ಮೂಲಕ ಪೂರ್ವ ದಿಕ್ಕಿನಿಂದ ಮಂದಿರಕ್ಕೆ ಪ್ರವೇಶ.
- ಆಯತಾಕಾರವಾಗಿ ಮಂದಿರದ ಸುತ್ತಲೂ ಪರಿಕ್ರಮ 732 ಮೀಟರ್ ಉದ್ದ, 4.25(14 ಅಡಿ)ಮೀಟರ್ ಅಗಲವಿರಲಿದೆ.
- ಸ್ತಂಭಗಳು ಮತ್ತು ಬಾಗಿಲುಗಳ ಮೇಲೆ ದೇವಾಧಿದೇವತೆಗಳ ಮತ್ತು ದೇವಾಂಗನೆಯರ ಮೂರ್ತಿಗಳು ಇರಲಿವೆ.
- ಮಂದಿರದ ಅಡಿಪಾಯವನ್ನು 14 ಮೀ. ದಪ್ಪ ರೋಲರ್-ಕಾಂಪ್ಯಾಕ್ಟ್ ಕಾಂಕ್ರೀಟ್ ಪದರದಿಂದ ನಿರ್ಮಿಸಲಾಗಿದೆ.
- ಗರ್ಭಗುಡಿಯಲ್ಲಿ ಶ್ರೀರಾಮಲಲಾನ ವಿಗ್ರಹ ಮತ್ತು ಮೊದಲನೇ ಮಹಡಿಯ ಗರ್ಭಗುಡಿಯಲ್ಲಿ ಶ್ರೀರಾಮ ದರ್ಬಾರ್ ಇರಲಿದೆ.
- ಮಂದಿರದಲ್ಲಿ ನೆಲದ ತೇವಾಂಶದಿಂದ ರಕ್ಷಣೆ ಪಡೆಯುವ ಸಲುವಾಗಿ ಗ್ರಾನೈಟ್ ಬಳಸಿ 21 ಅಡಿ ಎತ್ತರದ ಸ್ತಂಭ ನಿರ್ಮಾಣವಾಗಿದೆ.
- ಒಟ್ಟು ಐದು ಮಂಟಪಗಳು – ನೃತ್ಯ ಮಂಟಪ, ರಂಗ ಮಂಟಪ, ಸಭಾ ಮಂಟಪ, ಪ್ರಾರ್ಥನಾ ಮತ್ತು ಕೀರ್ತನಾ ಮಂಟಪಗಳು.
- ಈ ಮಂದಿರವನ್ನು ಸಂಪೂರ್ಣವಾಗಿ ಭಾರತದ ಸಾಂಪ್ರದಾಯಿಕ ಮತ್ತು ದೇಶೀಯ ತಂತ್ರಜ್ಞಾನವನ್ನು ಬಳಸಿಕೊಂಡು ನಿರ್ಮಿಸಲಾಗುತ್ತಿದೆ.
- 70 ಎಕರೆ ಪ್ರದೇಶದ 70% ರಷ್ಟು ಹಸಿರಿನಿಂದ ಕೂಡಿದ್ದು, ಪರಿಸರ-ಜಲ ಸಂರಕ್ಷಣೆಗೆ ಒತ್ತು ನೀಡಿ ಇದನ್ನು ನಿರ್ಮಿಸಲಾಗುತ್ತಿದೆ.
- ಮಂದಿರದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಂದಿರಗಳು – ಭಗವಾನ್ ಸೂರ್ಯ, ಭಗವಾನ್ ಶಂಕರ, ಭಗವಾನ್ ಗಣಪತಿ, ದೇವಿ ಭಗವತೀ.
- ನೈರುತ್ಯ ಭಾಗದಲ್ಲಿ ನವರತ್ನ ಕುಬೇರ ಪೀಠದಲ್ಲಿ ಸ್ಥಿತನಾದ ಶಿವಮಂದಿರದ ಜೀರ್ಣೋದ್ಧಾರ ಮತ್ತು ರಾಮ ಭಕ್ತ ಜಟಾಯು ರಾಜನ ಪ್ರತಿಮೆಯು ಇರಲಿದೆ.
- ಮಂದಿರವು ಮೂರು ಅಂತಸ್ತಿನ ಕಟ್ಟಡದಿಂದ ಕೂಡಿದ್ದು, ಪ್ರತಿ ಮಹಡಿಯು 20 ಅಡಿ ಎತ್ತರವಿದೆ. ಇದು ಒಟ್ಟು 392 ಸ್ತಂಭಗಳು ಮತ್ತು 44 ಬಾಗಿಲುಗಳನ್ನು ಒಳಗೊಂಡಿದೆ.
- ಮಹರ್ಷಿ ವಾಲ್ಮೀಕಿ, ಮಹರ್ಷಿ ವಸಿಷ್ಠ, ಮಹರ್ಷಿ ವಿಶ್ವಾಮಿತ್ರ, ಮಹರ್ಷಿ ಅಗಸ್ತ್ಯ, ನಿಷಾದ ರಾಜ ಗುಹ, ಮಾತಾ ಶಬರಿ ಮತ್ತು ದೇವಿ ಅಹಲ್ಯಾ ಮಂದಿರಗಳು ಇರಲಿವೆ.



### ಶ್ರೀರಾಮ ಅಯೋಧ್ಯೆಗೆ ಮರಳಿದ ಸಂತಸ

ಜನವರಿ 22, 2024ರಂದು ಅಭಿಜಿತ್ ಮೂಹೂರ್ತದಲ್ಲಿ ಶ್ರೀರಾಮ ಪ್ರತಿಷ್ಠಾಪನೆಗೊಳ್ಳಲಿದ್ದಾನೆ. ರಾಮ ಅಯೋಧ್ಯೆಗೆ ಮರಳಿ ಬಂದಾಗ ಇದ್ದ ಸಂತೋಷ ಈಗಲೂ ಮೂಡಿದೆ. ರಾಮನ ಮಂದಿರ ಒಡೆಯುವುದರಿಂದ ಹಿಂದೂ ಧರ್ಮವನ್ನು ಸಂಪೂರ್ಣ ನಾಶ ಮಾಡಬಹುದು ಎಂದು ಬಾಬರ್‌ಗೆ ಅನಿಸಿತ್ತು. ಹಾಗಾಗಿ ಅದನ್ನು ಒಡೆದ. ಹಿಂದೂಗಳು ರಾಷ್ಟ್ರ, ಧರ್ಮದ ಮೇಲಿನ ಅಪಮಾನವನ್ನು ಸಹಿಸಲಾರರು. ಈ ಮಂದಿರಕ್ಕಾಗಿ 500 ವರ್ಷಗಳಿಂದ ನಿರಂತ ಹೋರಾಟ ನಡೆದಿದೆ. ಈಗ ನಿರ್ಮಾಣವಾಗುತ್ತಿರುವ ಮಂದಿರಕ್ಕೆ ಜಗತ್ತಿನ ಮೂಲೆ ಮೂಲೆಯಿಂದ ಜನ ಬರುತ್ತಿದ್ದಾರೆ.

**ಗೋಪಾಲ್ ನಾಗರಕಟ್ಟೆ,** ವಿಶ್ವ ಹಿಂದೂ ಪರಿಷತ್ ಮುಖಂಡರು

**ಮನೆಮನೆಗೆ ಮಂತ್ರಾಕ್ಷತೆ:** ರಾಮಲಲಾ ಪ್ರಾಣಪ್ರತಿಷ್ಠೆ ಹಿನ್ನೆಲೆಯಲ್ಲಿ ಕರಪತ್ರ, ಮಂತ್ರಾಕ್ಷತೆ, ರಾಮಮಂದಿರದ ಭಾವಚಿತ್ರವನ್ನು ಪ್ರತಿಯೊಂದು ಮನೆಗೆ ವಿಶ್ವ ಹಿಂದೂ ಪರಿಷತ್ತಿನ ಕಾರ್ಯಕರ್ತರು ನೀಡುತ್ತಿದ್ದಾರೆ.
ಜ. 1–15ರವರೆಗೆ ದೇಶಾದ್ಯಂತ ಈ ಅಭಿಯಾನ ನಡೆಯಿತು.

**5000ಕ್ಕೂ ಅಧಿಕ ವಿಗ್ರಹಗಳು:** 5000ಕ್ಕೂ ಹೆಚ್ಚು ದೇವಾನುದೇವತೆಗಳ ಮೂರ್ತಿಗಳನ್ನು ಮಂದಿರದಲ್ಲಿ ಅದ್ಭುತವೆನಿಸುವಂತೆ ಕೆತ್ತಲಾಗಿದ್ದು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಲಾಗುತ್ತದೆ

**ರಾಮಮಂದಿರ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ?**
ಮಂದಿರದ ಭೂ ಮಹಡಿ ಪೂರ್ಣಗೊಂಡು, ಮೊದಲ ಮಹಡಿ ಕಾರ್ಯವೂ ಮುಗಿಯುತ್ತಾ ಬಂದಿದೆ. ಈಗ ಗರ್ಭಗೃಹದ ಮೇಲ್ಭಾಗದ ಮಹಡಿ ಕೆಲಸ ನಡೆಯುತ್ತಿದೆ. ಮಂದಿರ ಸಂಪೂರ್ಣವಾಗಿ ನಿರ್ಮಾಣಗೊಳ್ಳಲು 5 ವರ್ಷ ಬೇಕು. ಭವ್ಯ ಮಂದಿರ ನೋಡಬೇಕೆಂಬ ಜನಾಪೇಕ್ಷೆ ಬೆಟ್ಟದಷ್ಟಿದ್ದುದರಿಂದ ಯಥಾಶೀಘ್ರ ರಾಮನನ್ನು ಅವನ ಸ್ಥಾನದಲ್ಲೇ ಜನರಿಗೆ ದರ್ಶನ ಮಾಡಿಸಬೇಕೆನ್ನುವುದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಉದ್ದೇಶವಾಗಿತ್ತು. ಹಾಗಾಗಿ, ಮೊದಲ ಮಹಡಿ ಪೂರ್ಣಗೊಳ್ಳುತ್ತಿದ್ದಂತೆ ಪ್ರಾಣಪ್ರತಿಷ್ಠೆ ನಡೆಸಲು ಮುಂದಾಗಿದೆ. ಜ. 23ರಿಂದಲೇ ಜನರಿಗೆ ರಾಮನ ಮೂಲಸ್ಥಾನದಲ್ಲಿ ದರ್ಶನ ಸಿಗಲಿದೆ.

**ರಾಮ ಮಂದಿರ ಸಮುಚ್ಚಯದಲ್ಲಿ ಬೇರೆ ಏನೇನಿರಲಿದೆ?** ಈಗಿರುವ ಸುಮಾರು 70 ಎಕರೆಯಲ್ಲಿ ಮಂದಿರದ ಹೊರತಾಗಿ ಹೊರಗಡೆ 75 ಅಡಿ ಅಂತರದಲ್ಲಿ ಪ್ರಾಕಾರ ಬರಲಿದೆ. ಪ್ರಾಕಾರ ಎಂದರೆ ಪ್ರದಕ್ಷಿಣೆ ಮಾರ್ಗ ಎನ್ನಬಹುದು. ಅದು 750 ಮೀಟರ್ ಸುತ್ತಳತೆಯಲ್ಲಿದ್ದು, ಅಲ್ಲಿ 6 ದೇವಸ್ಥಾನಗಳಿರುತ್ತವೆ. ಶಿವ, ಗಣೇಶ, ಸೂರ್ಯ, ಅನ್ನಪೂರ್ಣ, ಭಗವತಿ ಮತ್ತು ಹನುಮಂತನ ಮೂರ್ತಿಗಳು ಪ್ರತಿಷ್ಠಾಪನೆಗೊಳ್ಳಲಿವೆ. ಋಷಿ ಪರಿಸರವೂ ನಿರ್ಮಾಣಗೊಳ್ಳಲಿದ್ದು, ಅಲ್ಲಿ ವಾಲ್ಮೀಕಿ, ವಿಶ್ವಾಮಿತ್ರ, ವಸಿಷ್ಠ, ದೇವಿ ಅಹಲ್ಯೆ, ಮಾತಾ ಶಬರಿ ಸೇರಿ ಅನೇಕರ ಮೂರ್ತಿಗಳು ಇರಲಿವೆ. ಇವುಗಳೆಲ್ಲವೂ ಸುಮಾರು 10 ಎಕರೆ ಭೂಮಿಯಲ್ಲಿ ನಿರ್ಮಾಣಗೊಳ್ಳಲಿವೆ. ಗರ್ಭಗುಡಿಯ ಮೇಲ್ಭಾಗದಲ್ಲಿ ರಾಮ ಪರಿವಾರ ಇರುತ್ತದೆ.



**ರಾಮಮಂದಿರ ಕುರಿತು 'ಪುಂಗವ'ದಲ್ಲಿ ವಿಸ್ತೃತ ಮಾಹಿತಿ:**

**ಭಾಗ-1:** ರಾಮಜನ್ಮಭೂಮಿಗಾಗಿ ನಡೆದ ಐತಿಹಾಸಿಕ ಹೋರಾಟದ ಮೈಲಿಗಲ್ಲುಗಳು (ಡಿಸೆಂಬರ್ 1, 2023ರ ಸಂಚಿಕೆ)

**ಭಾಗ-2:** ರಾಮಜನ್ಮಭೂಮಿಗಾಗಿ ನಡೆದ ಸಂವಿಧಾನಾತ್ಮಕ ಹೋರಾಟದ ಮೈಲಿಗಲ್ಲುಗಳು (ಡಿಸೆಂಬರ್ 15, 2023ರ ಸಂಚಿಕೆ)

**ಭಾಗ-3:** ಸಾಂಸ್ಕೃತಿಕವಾಗಿ ರಾಷ್ಟ್ರವನ್ನು ಬೆಸೆದ ಶ್ರೀರಾಮ (ಜನವರಿ 1, 2024ರ ಸಂಚಿಕೆ)




ರಾಮಮಂದಿರ ನಿರ್ಮಾಣದ ವಿವಿಧ ಚಿತ್ರಗಳು







# ಅಯೋಧ್ಯೆಯ ರಾಮಮಂದಿರ ಸಾಂಸ್ಕೃತಿಕ ಪುನರುತ್ಥಾನದ ಸಂಕೇತ

**ಮಂದಿರದಲ್ಲಿ ಪಾಲಿಸುವ ಪೂಜಾಶೈಲಿ:** ಅಯೋಧ್ಯೆಯಲ್ಲಿ ರಾಮಾನಂದಿ ಸಂಪ್ರದಾಯವಿದೆ. ನೂರಾರು ವರ್ಷಗಳಿಂದ ಈ ಸಂಪ್ರದಾಯದ ಪಾಲನೆಯಾಗಿದೆ. ಅದೇ ಪೂಜಾ ಪದ್ಧತಿ ಪಾಲನೆಯಾಗಲಿದೆ. 13–14ನೇ ಶತಮಾನದಲ್ಲಿ ಇದ್ದ ವೈಷ್ಣವ ಪರಂಪರೆಯ ರಾಮಾನಂದರು ಆಗಿನ ಆಕ್ರಮಣದ ಸಂದರ್ಭದಲ್ಲಿ ಹಿಂದು ಧರ್ಮ ಉಳಿಸುವ ಕಾರ್ಯವನ್ನು ಭಕ್ತಿ ಪರಂಪರೆ ಮೂಲಕ ಶುರು ಮಾಡುತ್ತಾರೆ. ಕಬೀರ, ತುಳಸೀದಾಸ, ಮೀರಾ ಎಲ್ಲರೂ ಅವರ ಶಿಷ್ಯರಾಗಿದ್ದರು. ಹೀಗೆ ಬೇರೆ ಬೇರೆ ಸಮಾಜದ ಜನರಲ್ಲಿ ರಾಮನ ಕುರಿತು ಭಕ್ತಿಭಾವ ಬೆಳೆಸುವ ಸಂಪ್ರದಾಯ ಶುರು ಮಾಡಿ ಮಂತ್ರಕ್ಕಿಂತ ಭಕ್ತಿಗೆ ಹೆಚ್ಚು ಮಹತ್ವ ಎನ್ನುವುದನ್ನು ಸಾರಿದವರು ರಾಮನಂದರು.

**ರಾಮಮಂದಿರ ನಿರ್ಮಾಣ ಕಾರ್ಯದ ನಂತರ ಅಯೋಧ್ಯೆಯಲ್ಲಾದ ಬದಲಾವಣೆಗಳೇನು?** 3 ವರ್ಷಗಳಲ್ಲಿ ಮಂದಿರದ ದರ್ಶನಾರ್ಥಿಗಳ ಸಂಖ್ಯೆ ಬಹಳ ಹೆಚ್ಚಾಗಿದೆ. ರಸ್ತೆಗಳನ್ನು ಅಗಲ ಮಾಡಲಾಗಿದೆ. 2020ರಲ್ಲಿ ನಿತ್ಯಕ್ಕೆ 6000 ಇದ್ದ ಯಾತ್ರಿಕರ ಸಂಖ್ಯೆ ಈಗ 20000ಕ್ಕೇರಿದೆ. ಅಂದರೆ ಮೂರು ಪಟ್ಟು ಹೆಚ್ಚಳವಾಗಿದೆ. ಜ.22ರ ಪ್ರಾಣಪ್ರತಿಷ್ಠೆ ನಂತರ ಯಾತ್ರಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಲಿದೆ.

**ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣ ಪ್ರಕ್ರಿಯೆಯ ನಂತರದ ಜನಜೀವನ ಹೇಗಿದೆ?** ಯಾವುದೇ ಊರಾದರೂ ಆರ್ಥಿಕತೆ, ಸಂಪನ್ನತೆ ಇಲ್ಲದಿದ್ದಾಗ ಮನೆ, ಆಹಾರ ಪದ್ಧತಿ, ಜೀವನಶೈಲಿ ಸಾದಾ ಇರುತ್ತವೆ. ಆದರೆ ಊರಿನ ಚಹರೆಯನ್ನೇ ಸಾತ್ವಿಕವಾಗಿ ಬದಲಿಸುವ ಮಟ್ಟಿನ ಯೋಜನೆ ಆ ಊರಿನಲ್ಲಾದಾಗ ಜನಜೀವನ ಸುಧಾರಿಸುವುದು ಸಹಜ. ರಾಮಮಂದಿರ ನಿರ್ಮಾಣದಿಂದ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಸಹಜವಾಗಿಯೇ ಸ್ಥಳೀಯರ ಆದಾಯ ಹೆಚ್ಚಾಗಲಿದೆ. ಹೊಟೇಲ್, ವಾಹನ ಸೇರಿ ಹತ್ತು ಹಲವು ಅಂಶಗಳ ಬೇಡಿಕೆ ಹೆಚ್ಚಾಗಿ ಕಾರ್ಮಿಕರಿಗೂ ಬೇಡಿಕೆ ಹೆಚ್ಚಲಿದೆ. ವ್ಯಾಪಾರ, ಉದ್ಯೋಗದಿಂದ ಆದಾಯವೂ ಹೆಚ್ಚಿ, ಜನರ ಜೀವನದಲ್ಲೂ ಪರಿವರ್ತನೆಯಾಗುತ್ತಿದೆ. ಮಂದಿರ ನಿರ್ಮಾಣದ ಪರಿಣಾಮ ಪ್ರತ್ಯಕ್ಷ/ಪರೋಕ್ಷವಾಗಿ ಅಯೋಧ್ಯೆಯಲ್ಲಿ ಸಾವಿರಾರು ಮಂದಿಗೆ ಉದ್ಯೋಗ ಸಿಕ್ಕಿದೆ.

## ವಿಶ್ವದ ರಾಮಭಕ್ತರಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ನಿವೇದನೆ

ವಿಕ್ರಮ ಸಂವತ್ಸರ 2080, ಯುಗಾಬ್ಧ 5125, ಶ್ರೀ ಶೋಭಕೃತ್‌ನಾಮ ಸಂವತ್ಸರ, ಉತ್ತರಾಯಣ, ಹೇಮಂತಋತು, ಪುಷ್ಯಮಾಸ, ಶುಕ್ಲಪಕ್ಷ, ದ್ವಾದಶಿ, ಸೋಮವಾರ (ದಿನಾಂಕ: 22.01.2024) ಈ ಶುಭದಿನದಂದು, ಅಯೋಧ್ಯೆಯ ಶ್ರೀರಾಮ ಜನ್ಮಸ್ಥಾನದಲ್ಲಿ ನಿರ್ಮಾಣವಾಗುತ್ತಿರುವ ಭವ್ಯ ಮಂದಿರದ ನೆಲ ಅಂತಸ್ತಿನಲ್ಲಿರುವ ಗರ್ಭಗುಡಿಯಲ್ಲಿ ಶ್ರೀ ರಾಮಲಲ್ಲಾ (ಬಾಲರಾಮನ) ನೂತನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಯು ನೆರವೇರಲಿದೆ. ಈ ನಿಟ್ಟಿನಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ವಿಶ್ವದ ರಾಮಭಕ್ತರಲ್ಲಿ ನಿವೇದನೆಗಳನ್ನು ಮಾಡಿಕೊಂಡಿದೆ.

- ದಿನಾಂಕ: 22.01.2024 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.00ರ ಮಧ್ಯದಲ್ಲಿ ಪ್ರಾಣ ಪ್ರತಿಷ್ಠಾಪನೆ ನಡೆಯಲಿದೆ. ಅಯೋಧ್ಯಾ ನಗರಿಯಲ್ಲಿ ಈ ಸಂದರ್ಭದಲ್ಲಿ ಅಭೂತಪೂರ್ವ ಸಂಭ್ರಮದ ವಾತಾವರಣವು ನಿರ್ಮಾಣವಾಗಲಿದೆ. ಈ ಅಮೃತ ಘಳಿಗೆಯಲ್ಲಿ, ತಾವೂ ಸಹ ತಮ್ಮ ತಮ್ಮ ಗ್ರಾಮ, ಮೊಹಲ್ಲಾ, ಕಾಲೋನಿ, ಬಸ್ತಿಗಳಲ್ಲಿರುವ ಮಂದಿರಗಳಲ್ಲಿ ಕಾರ್ಯಕ್ರಮವನ್ನು ಮಂದಿರ ಕೇಂದ್ರಿತವಾಗಿ ಆಯೋಜಿಸಿ.
- ಆಯಾ ಗ್ರಾಮದಲ್ಲಿರುವ ಮಂದಿರದಲ್ಲಿ ಸುತ್ತಮುತ್ತಲಿನ ರಾಮಭಕ್ತರನ್ನು ಒಗ್ಗೂಡಿಸಿ, ಕಾರ್ಯಕ್ರಮವನ್ನು ಆಯೋಜಿಸಿ.
- ದೂರದರ್ಶನ(TV) ಅಥವಾ LED ಪರದೆ ಅಥವಾ ಪ್ರೊಜೆಕ್ಟರ್ ಹಾಗೂ ಯಾವುದೇ ತರಹದ ಪರದೆಯಲ್ಲಿ ಅಯೋಧ್ಯೆಯ ಕಾರ್ಯಕ್ರಮವನ್ನು ನೇರವಾಗಿ ವೀಕ್ಷಿಸಲು ವ್ಯವಸ್ಥೆಯನ್ನು ಮಾಡಿ.
- ಆಯಾ ಮಂದಿರದಲ್ಲಿ ಪ್ರತಿಷ್ಠಾಪನೆಯಾಗಿರುವ ವಿವಿಧ ದೇವತೆಗಳ ಭಜನೆ, ಕೀರ್ತನೆ, ಪೂಜೆ ಮತ್ತು ಆರತಿಯನ್ನು ಮಾಡಿ.
- "ಶ್ರೀರಾಮ ಜಯರಾಮ ಜಯಜಯರಾಮ" ವಿಜಯ ಮಹಾಮಂತ್ರವನ್ನು ಸಾಮೂಹಿಕವಾಗಿ 108 ಬಾರಿ ಜಪ ಮಾಡಿ.
- ಇದರ ಜೊತೆಗೆ ಹನುಮಾನ್ ಚಾಲಿಸಾ, ಸುಂದರಕಾಂಡ ಪಾರಾಯಣ, ರಾಮರಕ್ಷಾಸ್ತೋತ್ರದ ಪಠಣಗಳನ್ನೂ ಸಹ ಜೋಡಿಸಿಕೊಳ್ಳಬಹುದು.
- ಪ್ರತಿಷ್ಠಾಪನೆಯ ನಂತರ ಶಂಖನಾದ ಮತ್ತು ಘಂಟಾನಾದದೊಂದಿಗೆ ಆರತಿ ಮತ್ತು ಪ್ರಸಾದದ ವಿತರಣೆಯನ್ನು ಮಾಡಿ.
- ಪ್ರಾಣ ಪ್ರತಿಷ್ಠಾಪನೆಯ ದಿನದಂದು ಸಂಜೆ ಸೂರ್ಯಾಸ್ತವಾದ ಮೇಲೆ ತಮ್ಮ ತಮ್ಮ ಮನೆಗಳ ಮುಂದೆ ಎಲ್ಲಾ ದೇವಾಧಿದೇವತೆಗಳನ್ನು ಪ್ರಸನ್ನಗೊಳಿಸಲು ದೀಪಗಳನ್ನು ಬೆಳಗಿಸಿ.
- ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನೆಯ ದಿನದ ನಂತರ ಪ್ರಭು ಶ್ರೀ ರಾಮಲಲಾ(ಬಾಲರಾಮನ) ದರ್ಶನ ಮತ್ತು ನವನಿರ್ಮಿತ ಭವ್ಯ ಜನ್ಮಭೂಮಿ ಮಂದಿರವನ್ನು ದರ್ಶಿಸಲು ತಮಗೆ ಅನುಕೂಲದ ಸಮಯದಲ್ಲಿ ಪರಿವಾರ ಸಮೇತರಾಗಿ ಅಯೋಧ್ಯಾನಗರಿಗೆ ಬರುವಂತೆ ಮತ್ತು ಅದರಿಂದ ಪ್ರಭು ಶ್ರೀರಾಮಚಂದ್ರನ ಸಂಪೂರ್ಣ ಕೃಪೆಗೆ ಪಾತ್ರರಾಗುವಂತೆ ತಮ್ಮಲ್ಲಿ ವಿನಂತಿ.
- ಈ ಪ್ರತಿಷ್ಠಾಪನೆಯ ದಿನ ಯಾವುದೇ ಮೆರವಣಿಗೆ, ಶೋಭಾಯಾತ್ರೆ, ಸಾರ್ವಜನಿಕ ಕಾರ್ಯಕ್ರಮ ಮತ್ತು ಪಟಾಕಿ ಸಿಡಿಸುವುದು ಅಪೇಕ್ಷೆಯಲ್ಲ.







## ರಾಮಮಂದಿರ ಮತ್ತು ಕರ್ನಾಟಕದ ಬಾಂಧವ್ಯ

ಶ್ರೀರಾಮ ವಿಜಯಿಶಾಲಿಯಾಗಿ ಮರಳಿ ಅಯೋಧ್ಯೆಯಲ್ಲಿ ಪಟ್ಟಾಭಿಶಿಕ್ತನಾಗಬೇಕಾದರೆ ಆಂಜನೇಯ ವಹಿಸಿದಷ್ಟೇ ಪ್ರಧಾನಪಾತ್ರವನ್ನು ರಾಮಮಂದಿರ ನಿರ್ಮಾಣದಲ್ಲಿ ಕರ್ನಾಟಕ ವಹಿಸುತ್ತಿದೆ. ಅಯೋಧ್ಯೆಯ ಆಂದೋಲನದ ಅಂತಿಮ ಘಟ್ಟದವರೆಗೆ ತೊಡಗಿಕೊಂಡವರು ಉಡುಪಿಯ ಪೇಜಾವರ ಮಠದ ವಿಶ್ವೇಶತೀರ್ಥರು. ಅಯೋಧ್ಯೆ ರಾಮಜನ್ಮಭೂಮಿಯ ಕುರಿತು 2019ರಲ್ಲಿ ಐತಿಹಾಸಿಕ ತೀರ್ಪು ಪ್ರಕಟಿಸಿದ ಸರ್ವೋಚ್ಚ ನ್ಯಾಯಾಲಯದ ಪಂಚ ಸದಸ್ಯ ಪೀಠದಲ್ಲಿ ಒಬ್ಬರಾದ ನ್ಯಾ.ಅಬ್ದುಲ್ ನಜೀರ್ ಮಂಗಳೂರಿನವರು. ರಾಮಮಂದಿರ ನಿರ್ಮಾಣ ಕಾರ್ಯ ಆರಂಭದ ನಂತರ ಅದರ ಜವಾಬ್ದಾರಿ ವಹಿಸಿದವರು ಉತ್ತರಕನ್ನಡದ ಹೊಸ್ತೋಟ ಗೋಪಾಲ್ ನಾಗರಕಟ್ಟೆಯವರು. ಗರ್ಭಗುಡಿಯಲ್ಲಿ ಪ್ರಾಣಪ್ರತಿಷ್ಠೆಯಾಗಬೇಕಿರುವ ಬಾಲರಾಮನ ವಿಗ್ರಹವನ್ನು ಕೆತ್ತಲು ಆಯ್ಕೆಯಾದ ಮೂವರು ಶಿಲ್ಪಿಗಳಲ್ಲಿ ಇಬ್ಬರು (ಅರುಣ್ ಯೋಗಿರಾಜ್ ಮತ್ತು ಗಣೇಶ್ ಭಟ್) ಕನ್ನಡ ನಾಡಿನವರು. ರಾಮಮಂದಿರದ ಬುನಾದಿಗೆ ಚಿಕ್ಕಬಳ್ಳಾಪುರದ ಹೊರವಲಯದ ಗುಕನಹಳ್ಳಿ ಮತ್ತು ಅಡಿಗಲ್ಲು ಬಂಡೆ ಗ್ರಾಮದ ಕಲ್ಲುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ರಾಮಲಲಾನ ಮೂರ್ತಿಗಳನ್ನು ಕೆತ್ತಲು ಅಂತಿಮವಾಗಿ ಆಯ್ಕೆಯಾದ ಕೃಷ್ಣ ಶಿಲೆಗಳು ಕರ್ನಾಟಕದ ಹೆಗ್ಗನದೇವನಕೋಟೆಯದ್ದು. ರಾಮಮಂದಿರಕ್ಕೆ ಬೆಳಕನ್ನು ಅಳವಡಿಸುವ ಕಾರ್ಯನಿರ್ವಹಿಸುತ್ತಿರುವುದು ಕರ್ನಾಟಕದ ಶಂಕರ್ ಎಲೆಕ್ಟ್ರಿಕಲ್ ಸರ್ವೀಸ್ ಪ್ರೈ.ಲಿ. ಸಂಸ್ಥೆ. ರಾಮಮಂದಿರಕ್ಕೆ ಬಳಸಲಾಗುತ್ತಿರುವ ಕಲ್ಲುಗಳ ಪರೀಕ್ಷೆಯನ್ನೂ ಸಹ ಕರ್ನಾಟಕದಲ್ಲಿರುವ ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ರಾಕ್ ಮೆಕ್ಯಾನಿಕಲ್ ಸಂಸ್ಥೆ ಮಾಡುತ್ತಿದೆ. ಹಾಗೆಯೇ ಪ್ರತಿ ವರ್ಷ ಶ್ರೀರಾಮ ನವಮಿಯ ದಿನ ಅಯೋಧ್ಯೆಯ ರಾಮ ಮಂದಿರದ ಗರ್ಭಗುಡಿಯಲ್ಲಿರುವ ರಾಮಲಲಾನ ಹಣೆಯ ಮೇಲೆ ಸೂರ್ಯರಶ್ಮಿ ಬೀಳುವ ಹಾಗೆ ತಂತ್ರಜ್ಞಾನ ಸಿದ್ಧವಾಗುತ್ತಿರುವುದು ಬೆಂಗಳೂರಿನಲ್ಲೇ ಎನ್ನುವುದು ಕನ್ನಡಿಗರು ಸಾರ್ವಕಾಲಿಕವಾಗಿ ಹೆಮ್ಮೆಪಡುವ ಸಂಗತಿ.

### ಸೀತಾರಸೋಯಿಯಿಂದಲೇ ರಾಮಲಲಾನಿಗೆ ಪ್ರಸಾದ

ಸೀತಾರಸೋಯಿ ರಾಮಮಂದಿರದ ವ್ಯಾಪ್ತಿಯಲ್ಲೇ ಇದೆ. ಸೀತಾ ರಸೋಯಿ ಎಂದರೆ ಸೀತೆಯ ಅಡುಗೆ ಮನೆ ಎಂದರ್ಥ. ಈ ಅಡುಗೆ ಮನೆಯಿಂದಲೇ ರಾಮನಿಗೆ ಪ್ರಸಾದ (ನೈವೇದ್ಯ) ಸಮರ್ಪಣೆಯಾಗಲಿದೆ. ರಾಮ–ಸೀತೆಯ ಬಾಂಧವ್ಯವನ್ನು ಸಂಕೇತಿಸುವ ಈ ಕಾರ್ಯ ನಿಜಕ್ಕೂ ಶ್ಲಾಘನೀಯ.

## ಗಣ್ಯರಿಗೆ ರಾಮಮಂದಿರದ ರಾಮಲಲಾ ಪ್ರಾಣಪ್ರತಿಷ್ಠಾಪನೆಯ ಆಮಂತ್ರಣ



ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ



ಹಿರಿಯ ನಾಯಕ ಎಲ್.ಕೆ. ಅಡ್ವಾಣಿ



ಹಿರಿಯ ನಾಯಕ ಮುರಳಿ ಮನೋಹರ ಜೋಶಿ



ಕೋರ್ಟ್ ಪ್ರಕರಣ ಹಾಗೂ ಭೂವಿವಾದದ ಮಾಜಿ ದಾವೆದಾರ ಇಕ್ಬಾಲ್ ಅನ್ಸಾರಿ.



ಖ್ಯಾತ ಚಿತ್ರನಟ ರಜನಿಕಾಂತ್

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th JANUARY 2024

REGISTERED NEWS PAPER RNI 36528/79 LICENSE TO POST
WITHOUT PREPAYMENT LICENSE NO PMG/BG/WPP-46/2024-2026 AT BENGALURU PSO
BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-01-2024



# ಅಯೋಧ್ಯೆಯ ವಿಜಯಧ್ವನಿ

## ನಂಬಿಕೆಗಳಿಗೆ ನ್ಯಾಯ ಒದಗಿಸಿದ ನ್ಯಾಯಾಲಯ



ಸುಪ್ರೀಂಕೋರ್ಟ್ ನಿರ್ಣಯ ಸಂಬಂಧದಲ್ಲಿ ಜನರ ಭಾವನೆ, ನಂಬಿಕೆಗಳಿಗೆ ನ್ಯಾಯ ಒದಗಿಸುವ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಈ ತೀರ್ಪನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘವು ಸ್ವಾಗತಿಸುತ್ತದೆ. ದಶಕಗಳಿಂದ ನಡೆಯುತ್ತಿದ್ದ ಸುದೀರ್ಘ ಕಾನೂನಾತ್ಮಕ ಪ್ರಕ್ರಿಯೆಯು ನ್ಯಾಯಯುತವಾಗಿ ಪೂರ್ಣಗೊಂಡಿದೆ. ಎಲ್ಲಾ ಪಕ್ಷದವರೂ ತಮ್ಮ ತಮ್ಮ ದೃಷ್ಟಿಕೋನದ ಪ್ರಕಾರ ನ್ಯಾಯಾಲಯದ ಮುಂದಿಟ್ಟ ವಾದಗಳ ಮೌಲ್ಯಮಾಪನ ನಡೆದಿದೆ. ಧೈರ್ಯದಿಂದ, ಸತ್ಯ ಹಾಗೂ ನ್ಯಾಯವನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಕೆಲಸ ಮಾಡಿದ ನ್ಯಾಯಮೂರ್ತಿಗಳಿಗೆ ಹಾಗೂ ವಕೀಲರುಗಳಿಗೆ ನಾವು ಶತಶತ ನಮನಗಳನ್ನು, ಅಭಿನಂದನೆಗಳನ್ನು ಅರ್ಪಿಸುತ್ತೇವೆ. ಈ ಸುದೀರ್ಘ ಅವಧಿಯ ಪ್ರಯತ್ನದಲ್ಲಿ ತಮ್ಮ ಯೋಗದಾನ ನೀಡಿದ ಸಹಕಾರಿಗಳನ್ನು, ಪ್ರಾಣತೆತ್ತ ಬಲಿದಾನಿಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ. ಭ್ರಾತೃತ್ವವನ್ನು ಬೆಳೆಸುವ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಪಾತ್ರವಹಿಸಿರುವ ಸರ್ಕಾರಗಳು ಹಾಗೂ ನಿರ್ಣಯ ಸ್ವೀಕಾರದ ಮನಃಸ್ಥಿತಿ ಹೊಂದಿರುವ ಈ ದೇಶದ ಜನತೆಯನ್ನು ಅಭಿನಂದಿಸಲೇಬೇಕು. ಅತ್ಯಂತ ಸಂಯಮದಿಂದ ನ್ಯಾಯದ ಪ್ರತೀಕ್ಷೆ ಮಾಡುತ್ತಿದ್ದ ಭಾರತೀಯರೆಲ್ಲರೂ ಅಭಿನಂದನೆಗೆ ಅರ್ಹರು. ಸತ್ಯ ಹಾಗೂ ನ್ಯಾಯದ ಮಂಥನದಿಂದ ದೊರೆತ ಈ ತೀರ್ಪನ್ನು ಸಂಪೂರ್ಣ ಸಮಾಜದ ಏಕಾತ್ಮತೆ ಹಾಗೂ ಬಂಧುತ್ವವನ್ನು ಬೆಳೆಸುವ ನಿಟ್ಟಿನಲ್ಲಿ ಬಂದ ತೀರ್ಪು ಎಂದು ನೋಡಬೇಕಿದೆ.

**ಡಾ. ಮೋಹನ್ ಭಾಗವತ್,** ಸರಸಂಘಚಾಲಕರು, ರಾ. ಸ್ವ. ಸಂಘ

## ರಾಮತತ್ತ್ವ ಹೃದಯದಲ್ಲಿ ನೆಲೆಸಲಿ



ಶ್ರೀ ರಾಮಲಲಾನ ಪ್ರಾಣಪ್ರತಿಷ್ಠೆ ಕಾರ್ಯಕ್ರಮವು ನಮ್ಮೆಲ್ಲರ ಜೀವನದಲ್ಲಿ ಒಂದು ಸುವರ್ಣ ಕ್ಷಣವಾಗಲಿದೆ. ರಾಮತತ್ತ್ವವು ನಮ್ಮ ಹೃದಯದಲ್ಲಿ, ನಮ್ಮ ಸಮಾಜದಲ್ಲಿ, ನಮ್ಮ ಜೀವನದ ಪ್ರತಿಯೊಂದು ಅಂಶದಲ್ಲೂ ಮರಳಲಿ. ಇಡೀ ಮಾನವಕುಲಕ್ಕೆ ಕಲ್ಯಾಣಕಾರಿ ರಾಮಮಯ ಜೀವನವು ಈ ದೇಶವನ್ನು ರೂಪಿಸಲಿ.

**ದತ್ತಾತ್ರೇಯ ಹೊಸಬಾಳೆ,** ಸರಕಾರ್ಯವಾಹರು, ರಾಷ್ಟ್ರೀಯ ಸ್ವಯಂಸೇವಕ ಸಂಘ

## ಜಗತ್ತಿನ ಅತ್ಯುತ್ತಮ ತೀರ್ಪು



ಅಯೋಧ್ಯೆಯ ರಾಮಜನ್ಮಭೂಮಿಯಲ್ಲಿ ದೇವಸ್ಥಾನವಾಗಬೇಕೆಂಬ ವಿಚಾರದಲ್ಲಿ ಸುಪ್ರೀಂಕೋರ್ಟ್ ಸತ್ಯ ಮತ್ತು ನ್ಯಾಯ ಎರಡನ್ನೂ ಒದಗಿಸಿದೆ. ಇದಕ್ಕಾಗಿ 491 ವರ್ಷಗಳಿಂದ ನಡೆದ ತ್ಯಾಗ, ಬಲಿದಾನ, ಹೋರಾಟಗಳು ಇನ್ನು ಮುಗಿದಿದೆ. ಸುಪ್ರೀಂಕೋರ್ಟ್ ತೀರ್ಪಿನ ಮೂಲಕ ಈ ಎಲ್ಲದಕ್ಕೂ ಇತಿಶ್ರೀ ಹಾಡಲಾಗಿದೆ. 40 ದಿನಗಳು ಅಂದರೆ 200 ಗಂಟೆಗೂ ಹೆಚ್ಚುಕಾಲಗಳ ಸುದೀರ್ಘ ವಿಚಾರಣೆಯ ನಂತರ ಜಗತ್ತಿನಲ್ಲೇ ಅತ್ಯುತ್ತಮ ಎನಿಸುವಂತಹ ತೀರ್ಪು ಹೊರಬಿದ್ದಿದೆ. ಇದಕ್ಕಾಗಿ ಭಾರತೀಯರೆಲ್ಲರೂ ಸುಪ್ರೀಂಕೋರ್ಟ್ ಅನ್ನು ಅಭಿನಂದಿಸಬೇಕಿದೆ. ಪ್ರಪಂಚದಾದ್ಯಂತ ಇರುವ ಹಿಂದುಗಳೆಲ್ಲರಿಗೂ ಇದು ಖುಷಿ ಕೊಡುವ ದಿನ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಈ ಹೋರಾಟದಲ್ಲಿ ಭಾಗಿಯಾದ ಹಿಂದುಗಳೆಲ್ಲರಿಗೂ ಧನ್ಯವಾದ. ನೈಜ ದಾಖಲೆ ಮತ್ತು ಪುರಾವೆಗಳನ್ನು ಒದಗಿಸಿದ ಭಾರತೀಯ ಪುರಾತತ್ವ ಇಲಾಖೆಯ ಸಿಬ್ಬಂದಿ, ಇತಿಹಾಸಕಾರರು, ವಕೀಲರೆಲ್ಲರಿಗೂ ಕೃತಜ್ಞತೆ.

**ಆಲೋಕ್ ಕುಮಾರ್,** ಕಾರ್ಯಾಧ್ಯಕ್ಷರು, ವಿಶ್ವ ಹಿಂದೂ ಪರಿಷತ್

## ರಾಮನ ಜನ್ಮಸ್ಥಳದಲ್ಲೇ ಮಂದಿರ ಕಟ್ಟುವೆವು



ಶ್ರೀರಾಮ ಅಯೋಧ್ಯೆಯಲ್ಲಿ ಜನಿಸಿದವನು. ಹಾಗಾಗಿ ಹಿಂದುಗಳು ಅಯೋಧ್ಯೆಯನ್ನು ಭಾರತದ ಅತ್ಯಂತ ಶ್ರದ್ಧಾಕೇಂದ್ರವನ್ನಾಗಿ ಕಾಣುತ್ತಾರೆ. ಆದ್ದರಿಂದ ಅಯೋಧ್ಯೆಯನ್ನು ಮರಳಿ ಪಡೆಯುವ ದೃಷ್ಟಿಯಿಂದ ರಾಷ್ಟ್ರದ ಮೂಲೆಮೂಲೆಗಳಲ್ಲೂ ಜನಜಾಗೃತಿಯನ್ನು ಕೈಗೊಂಡು, ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯದಿಂದ ನ್ಯಾಯವನ್ನು ಪಡೆಯುತ್ತೇವೆ.

**ಅಶೋಕ್ ಸಿಂಘಾಲ್**
ರಾಮಜನ್ಮಭೂಮಿ ಆಂದೋಲನದ ಪ್ರಮುಖ ನಾಯಕರಲ್ಲೊಬ್ಬರು

## ರಾಮಭಕ್ತಿ ರಾಷ್ಟ್ರಭಕ್ತಿಯನ್ನು ಬಲಗೊಳಿಸಲಿ



ನಾವೆಲ್ಲರೂ ರಾಷ್ಟ್ರಭಕ್ತಿಯನ್ನು ಬಲಗೊಳಿಸುವ ಅಗತ್ಯವಿದೆ. ನ್ಯಾಯದೇಗುಲವು ದಶಕಗಳ ಕಾಲದಿಂದ ನಡೆಯುತ್ತಿದ್ದ ವಿವಾದವನ್ನು ಸೌಹಾರ್ದಯುತವಾಗಿ ಇತ್ಯರ್ಥಗೊಳಿಸಿದೆ. ನ್ಯಾಯಾಂಗ ವ್ಯವಸ್ಥೆಯ ಮೇಲಿನ ಜನರ ವಿಶ್ವಾಸಕ್ಕೆ ಈ ತೀರ್ಪು ಮತ್ತಷ್ಟು ಬಲ ತುಂಬುತ್ತದೆ. ಯಾವುದೇ ವಿವಾದವನ್ನು ಸೌಹಾರ್ದಯುತವಾಗಿ ಕಾನೂನು ಮಾರ್ಗದಲ್ಲಿ ಬಗೆಹರಿಸಿಕೊಳ್ಳಬಹುದು ಎಂಬುದನ್ನು ಈ ತೀರ್ಪು ಎತ್ತಿತೋರಿಸಿದೆ. ನ್ಯಾಯಾಂಗದ ಸ್ವಾತಂತ್ರ್ಯ, ಪಾರದರ್ಶಕತೆ ಹಾಗೂ ದೂರದೃಷ್ಟಿತ್ವವನ್ನು ದೃಢಪಡಿಸಿದೆ. ಸುಪ್ರೀಂಕೋರ್ಟ್ ನೀಡಿರುವ ಮಹತ್ವಪೂರ್ಣ ತೀರ್ಪಿನ ಹಿಂದೆ ಹಲವು ವರ್ಷಗಳ ದೀರ್ಘಕಾಲದ ಇತಿಹಾಸವಿದೆ. ಭಾರತವು ವಿಶ್ವದ ಅತಿ ದೊಡ್ಡ ಪ್ರಜಾತಂತ್ರ ದೇಶವೆಂದು ವಿಶ್ವ ತಿಳಿದಿದೆ. ಆದರೆ ಭಾರತದ ಪ್ರಜಾತಂತ್ರ ಎಷ್ಟು ಜೀವಂತವಾಗಿದೆ ಎಂಬುದನ್ನು ಈ ತೀರ್ಪು ಸಾಬೀತುಪಡಿಸಿದೆ. ನ್ಯಾಯಾಲಯದ ತೀರ್ಪು ಬಂದನಂತರ ಪ್ರತಿ ವರ್ಗ, ಸಮುದಾಯ ಮತ್ತು ವಿವಿಧ ಪಂಥಗಳ ಜನರು ತೆರೆದ ಹೃದಯದಿಂದ ತೀರ್ಪನ್ನು ಸ್ವಾಗತಿಸಿದ್ದಾರೆ. ಭಾರತದ ಪುರಾತನ ಸಂಸ್ಕೃತಿ ಮತ್ತು ಸದ್ಭಾವನೆಗೆ ಇದು ಸಾಕ್ಷಿ.

**ನರೇಂದ್ರ ಮೋದಿ,** ಪ್ರಧಾನಮಂತ್ರಿಗಳು

## ನೂರಾರು ವರ್ಷಗಳ ಅಪೇಕ್ಷೆ ಪೂರ್ಣ



ರಾಮಜನ್ಮಸ್ಥಾನ ಮಂದಿರ ವಿವಾದ ಕುರಿತು, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ರಾಷ್ಟ್ರ ಸೇವಿಕಾ ಸಮಿತಿಯು ಸ್ವಾಗತಿಸುತ್ತದೆ. ಪ್ರಭು ಶ್ರೀರಾಮಚಂದ್ರನ ಜನ್ಮಸ್ಥಾನದ ವಿವಾದದ ತೀರ್ಪು ನೀಡಿರುವ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಪ್ರಕ್ರಿಯೆಯನ್ನು ರಾಷ್ಟ್ರ ಸೇವಿಕಾ ಸಮಿತಿಯು ಹೃದಯಪೂರ್ವಕವಾಗಿ ಸ್ವಾಗತಿಸುತ್ತದೆ. ಎಲ್ಲಾ ರಾಜಕೀಯ ಪಕ್ಷಗಳೂ ಇಂದಿನ ತೀರ್ಪನ್ನು ಗೌರವಿಸುವುದರ ಮೂಲಕ ಪರಸ್ಪರ ಅಂತರವನ್ನು ಕೊನೆಗೊಳಿಸಿ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಯ್ದುಕೊಂಡು ಸರಕಾರ ಮತ್ತು ಸಮಾಜದೊಂದಿಗೆ ಸಹಯೋಗ ನೀಡಿ ಸಾಮಾಜಿಕ ಸುಸಂಬದ್ಧತೆಯನ್ನು ಕಾಪಾಡುವುದು ಉತ್ತಮ. ಸರ್ವೋಚ್ಚ ನ್ಯಾಯಾಲಯದ ತೀರ್ಪು ನೂರಾರು ವರ್ಷಗಳ, ಕೋಟಿ ಕೋಟಿ ಜನರ ಅಪೇಕ್ಷೆಯಂತೆ ಶ್ರೀರಾಮನ ಜನ್ಮಸ್ಥಾನವಾದ ಅಯೋಧ್ಯೆಯಲ್ಲಿ ರಾಮಲಲಾನ ಮಂದಿರ ನಿರ್ಮಾಣದ ಹಾದಿಯನ್ನು ಸುಗಮಗೊಳಿಸಿದೆ.

**ವಿ. ಶಾಂತಾಕುಮಾರಿ,** ಪ್ರಮುಖ ಸಂಚಾಲಿಕಾ, ರಾಷ್ಟ್ರ ಸೇವಿಕಾ ಸಮಿತಿ

## ಮಂದಿರವಲ್ಲೇ ಕಟ್ಟುವೆವು



ಶ್ರೀರಾಮನ ಜನ್ಮಸ್ಥಳವನ್ನು ರಕ್ಷಿಸಲು ಮತ್ತು ಭಾರತದ ಪ್ರಾಚೀನ ವೈಭವವನ್ನು ಪುನರುಜ್ಜೀವನಗೊಳಿಸಲು ನಾವು ಕೆಲಸ ಮಾಡಬೇಕು. ನಮ್ಮದು ದೇವರು ಮತ್ತು ಮಹಾನ್ ಸಂತರ ನಾಡು. ಶ್ರೀರಾಮನ ಜನ್ಮಸ್ಥಳದ ಮುಕ್ತಿಗಾಗಿ ಹೊರಟ ರಾಮರಥ ಜನತೆಯ ರಥ, ಲೋಕರಥ. ಮನದಲ್ಲಿ ಕಾರಸೇವೆಯ ಸಂಕಲ್ಪ ಮಾಡಿದ್ದೇವೆ. ಮಂದಿರವನ್ನು ರಾಮಜನ್ಮಭೂಮಿಯಲ್ಲೇ ಕಟ್ಟುತ್ತೇವೆ. ಇದನ್ನು ತಡೆಯುವವರಾರು?

**ಎಲ್ ಕೆ ಅಡ್ವಾಣಿ,**
ಮಾಜಿ ಉಪಪ್ರಧಾನಿ

## ರಾಮಮಂದಿರ ರಾಷ್ಟ್ರದಲ್ಲಿ ರಾಮರಾಜ್ಯವನ್ನು ತರುತ್ತದೆ



ನನ್ನ ಜೀವಿತಾವಧಿಯಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗುವುದನ್ನು ನೋಡಲು ಬಯಸುತ್ತೇನೆ. ಇದು ದೇಶದಲ್ಲಿ ರಾಮರಾಜ್ಯವನ್ನು ತರುತ್ತದೆ. ಅಯೋಧ್ಯೆಯಲ್ಲಿ ರಾಮಮಂದಿರ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ನಾವು ಮುಸ್ಲಿಮರೊಂದಿಗೆ ಸೌಹಾರ್ದಯುತ ಸಂಬಂಧದಲ್ಲಿದ್ದರೆ, ನಾವು ಅಯೋಧ್ಯೆ ವಿಷಯದಿಂದ ಹಿಂದೆ ಸರಿಯಬೇಕು ಎಂದು ಅರ್ಥವಲ್ಲ. ಎರಡೂ ಧರ್ಮಗಳು ವಿಭಿನ್ನ ಸಿದ್ಧಾಂತಗಳು, ಮೌಲ್ಯಗಳು ಮತ್ತು ಆಚರಣೆಗಳನ್ನು ಹೊಂದಿದ್ದರೂ, ನಾವು ಶಾಂತಿಯುತ ಸಹಬಾಳ್ವೆಯನ್ನು ಹೊಂದಿದ್ದೇವೆ. ಪ್ರತಿಯೊಬ್ಬರೂ ಅಯೋಧ್ಯೆಯಲ್ಲಿ ರಾಮ ಮಂದಿರವನ್ನು ನಿರ್ಮಿಸಲು ಬಯಸುತ್ತಾರೆ.

**ಪೇಜಾವರ ಶ್ರೀ ವಿಶ್ವೇಶತೀರ್ಥರು**

## ರಾಮಮಂದಿರ ಹಿಂದೂಗಳ ಶ್ರದ್ಧಾಕೇಂದ್ರ



ಪುರಾತತ್ತ್ವ ಶಾಸ್ತ್ರದ ಪ್ರಕಾರ ವಿವಾದಿತ ಬಾಬರಿ ಮಸೀದಿಯ ಕೆಳಗೆ ದೇವಾಲಯದ ಅವಶೇಷಗಳು ಇದ್ದವು ಎಂದು ಹೇಳಲು ಸಾಕಷ್ಟು ಪುರಾವೆಗಳಿವೆ. ಮುಸಲ್ಮಾನರಿಗೆ ಮೆಕ್ಕಾ ಮತ್ತು ಮದೀನಾ ಎಷ್ಟು ಮುಖ್ಯವೋ ಹಾಗೆಯೇ ಹಿಂದೂಗಳಿಗೂ ರಾಮಮಂದಿರ ಮುಖ್ಯ. ಆದ್ದರಿಂದ, ಮುಸ್ಲಿಮರು ಅದನ್ನು ಸ್ವಇಚ್ಛೆಯಿಂದ ಹಿಂದೂಗಳಿಗೆ ಹಸ್ತಾಂತರಿಸಬೇಕು.

**ಕೆ.ಕೆ. ಮೊಹಮ್ಮದ್,** ಪುರಾತತ್ತ್ವಜ್ಞರು

ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.